ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮವನ್ನು ರಾಜ್ಯದಲ್ಲಿ ತೀವ್ರವಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಭೂ ರಹಿತ ಕುಟುಂಬಗಳಿಗೆ ಸ್ವ ಉದ್ಯೋಗ ಅವಕಾಶಗಳನ್ನು ಒದಗಿಸುವ ಸಲುವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಇಲ್ಲಾ.

೧೯೮೯ನೇ ಏಪ್ರಿಲ್‌ನಿಂದ ಇಲ್ಲಿಯವರೆಗೆ ಸರ್ಕಾರಿ ನೌಕರರಿಗೆ ಕೊಟ್ಟಿರುವ ಸಂಬಳ, ಪ್ರವಾಸಭತ್ಯದ ಬಗ್ಗೆ

೨೪೨. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೯ನೇ ಏಪ್ರಿಲ್‌ನಿಂದ ೧೯೯೦ರ ಫೆಬ್ರವರಿ ಕೊನೆಯವರೆಗೆ ಸರ್ಕಾರದ ವಿವಿಧ ಇಲಾಖೆಗಳಿಗೆ ಕೊಟ್ಟಿರುವ ಸಂಬಳದ ಮೊತ್ತವೆಷ್ಟು,

ಆ) ಇದರಲ್ಲಿ ವಿವಿಧ ಇಲಾಖೆಯ ಕಾರ್ಯದರ್ಶಿಗಳು, ನಿರ್ದೇಶಕರು ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಕೊಟ್ಟಿರುವ ಪ್ರವಾಸದ ಭತ್ಯ ಎಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಮಂತ್ರಿಗಳು). —

(ಅ) ಮತ್ತು (ಆ) ಪ್ರಶ್ನೆಗಳಿಗೆ ಉತ್ತರಿಸಲು, ಪ್ರಸ್ತುತ ಲೆಕ್ಕಪತ್ರ ಪದ್ಧತಿಯಲ್ಲಿ ಕೂಡಲೇ ಮಾಹಿತಿ ಲಭ್ಯವಾಗದು. ಹಣಕಾಸು ಸಾಲಿನ, ಅಂದರೆ ೧೯೮೯-೯೦ನೇ ಸಾಲಿನ ಅಂತಿಮ ಲೆಕ್ಕ ಪತ್ರಗಳು ಮಹಾಲೇಖಾಪಾಲರಿಂದ ಸ್ವೀಕೃತವಾದ ನಂತರವೇ ಈ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ.

ಕೆ.ಎಸ್.ಐ.ಸಿ.ನಲ್ಲಿ ಕಳೆದ ೩ ವರ್ಷಗಳಿಂದ ಆಗಿರುವ ನಷ್ಟ

೨೪೩ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಎಸ್.ಐ.ಸಿ.ನಲ್ಲಿ ಕಳೆದ ೩ ವರ್ಷಗಳಲ್ಲಿ ಆಗಿರತಕ್ಕ ನಷ್ಟ ಎಷ್ಟು ? (ಕಾರ್ಖಾನೆವಾರು ವಿವರಣೆಗಳನ್ನು ನೀಡುವುದು).

ಆ) ಈ ನಷ್ಟಗಳುಂಟಾಗಲು ಕಾರಣಗಳೇನು ?

ಇ) ಈ ನಷ್ಟಗಳನ್ನು ತಡೆಗಟ್ಟಲು ಸರ್ಕಾರದವರು ಏನಾದರೂ ಕ್ರಮಗಳನ್ನು ಕೈಗೊಂಡಿದ್ದಾರೆಯೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ ಸಚಿವರು).—

(ರೂ. ಲಕ್ಷಗಳಲ್ಲಿ)

		೮೬-೮೭	೮೭-೮೮	೮೮-೮೯
ಅ) ೧.	ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು	(+) ೩೦.೯೭	(—)೮೮.೩೭	(—) ೫೪.೪೦
೨.	ಜೂಟು ರೇಷ್ಮೆ ಗಿರಣಿ ಚನ್ನಪಟ್ಟಣ	(—) ೨೩೮.೬೩	(—)೩೯೦.೨೧	(—)೧೮೭.೯೩
೩.	ರೇ. ನೂ ತೆಗೆಯುವ ಘಟಕ ಟಿ. ನರಸೀಪುರ	(—) ೯೭.೪೯	(—)೨೪೮.೫೨	(—)೧೫೩.೭೮
೪.	ರೇ. ನೂ. ತೆಗೆಯುವ ಘಟಕ ಕನಕಪುರ	(—)೫೮.೮೨	(—) ೬೭.೦೩	(—)೧೦೦.೯೮
	ಒಟ್ಟು	(—)೪೨೫.೯೦	(—)೭೯೪.೦೩*	(—)೪೯೭.೦೯

* ಹಿಂದಿನ ವರ್ಷಗಳಲ್ಲಿ ಬಂಡವಾಳೀಕರಿಸಿರುವ ಕಾಲಾವಧಿ ಸಾಲವಾದ ರೂ. ೪೦೧.೩೬ ಲಕ್ಷಗಳನ್ನು ಹಿಂದಿನ ಅವಧಿಯ ವೆಚ್ಚವನ್ನೊಳಗೊಂಡಿರುತ್ತದೆ.